OC-318
T.P-2

51st Year of Publication ★ SATYAVADI Daily, MYSORE 4

Reg No B G 155 ಶ್ರೀ 13-6-1968

ಪ್ರಮುಖ ನರ್ತನೂವಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಜೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋನುವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ಶ್ರೀಮತಿ ಶ್ರೀಮತಿ ಎಂ. ಎ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಫ್ರಾನ್ಸಿನಲ್ಲಿ ಚುನಾವಣೆ ಸಂದರ್ಭದಲ್ಲಿ ಭೀಕರ ಪರಿಸ್ಥಿತಿ

ಮೈಸೂರು ಆಪೇರಾ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರೆದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ ನಡೆಯುವ ನೂತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವಂದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಭಾರತದ ನಿರ್ಧಾರ

ನವದೆಹಲಿ— ಪರಮಾಣು ಸಂಬಂಧದ ಒಪ್ಪಂದಕ್ಕೆ ರುಜು ಮಾಡುವುದಿಲ್ಲವೆಂಬ ಭಾರತ ಸರ್ಕಾರದ ನಿರ್ಧಾರದಲ್ಲಿ ಏನೂ ಬದಲಾವಣೆ ಇಲ್ಲವೆಂದು ಉಪ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಹೇಳಿದರು.

★

ಒಳ್ಳೇ ನೆರೆಹೊರೆ

ಮದರಾಸು— ಮೈಸೂರು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ನಿನ್ನೆ ಆಂಧ್ರ ಮುಖ್ಯಮಂತ್ರಿ ಶ್ರೀ ಬ್ರಹ್ಮಾನಂದ ರೆಡ್ಡಿಯವರಿಗೆ ಸತ್ಕಾರ ಏರ್ಪಡಿಸಿದ್ದಾಗ ಶ್ರೀ ರೆಡ್ಡಿಯವರು ಮಾಡಿದ ಭಾಷಣದಲ್ಲಿ 'ಆಂಧ್ರ, ಮೈಸೂರು ಮತ್ತು ಮದರಾಸು ಮತ್ತು ಕೇರಳಗಳಿಗೆ ಯಾವ ವ್ಯಾಜ್ಯವೂ ಇಲ್ಲವೆಂದೂ, ಒಳ್ಳೇ ನೆರೆಹೊರೆ ಆಗಿರುವವೆಂದೂ, ಹೇಳಿದರು.

★

ಡಾ॥ ಮೋದಿಯವರ ನೇತ್ರ ಚಿಕಿತ್ಸಾ ಶಿಬಿರ

ಪೆಯನೂರು.(ಕಾಸರಗೋಡು— ಈ ತಿಂಗಳು ಇಲ್ಲಿ ನಡೆಸಲಾದ ಡಾ॥ ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ 363 ಆಪರೇಷನ್‌ಗಳು ನಡೆದವು.

★

ಶುದ್ಧ ಆಯುರ್ವೇದ

ಬೆಂಗಳೂರು— ಇಲ್ಲಿಯ ವಿಶ್ವವಿದ್ಯಾಲಯದಲ್ಲಿ 69-70 ವಿದ್ಯಾಭ್ಯಾಸ ವರ್ಷದಿಂದ ಶುದ್ಧ ಆಯುರ್ವೇದದ ಪದವೀ ಕೋರ್ಸ್ ಜಾರಿಗೆ ಬರುವದು.

★

ಒಳ್ಳೇ ಯೋಚನೆ

ಮೈಸೂರು— ಪ್ರತಿ ಗ್ರಾಮವೂ ತನ್ನ ಮೂಲ ಆವಶ್ಯಕತೆಯಲ್ಲಿ ಸ್ವಾವಲಂಬವಾಗಿರಬೇಕೆಂದು ವುರ್ಲ ಆಪೆಕ್ಸ್ ಸೊಸೈಟಿ ಅಧ್ಯಕ್ಷ ಶ್ರೀ ಮಲ್ಲಪ್ಪನವರು ಹೇಳಿದರು.

ಸತ್ಯಸಂಧರು ಬೇಕು

ಬೆಂಗಳೂರು— ಮೈಸೂರು ರಾಜ್ಯದಿಂದ ನೆರೆ ರಾಜ್ಯಗಳಿಗೆ ಅದರಲ್ಲೂ ಕೇರಳಕ್ಕೆ ಅಕ್ಕಿ ಅಕ್ರಮ ಸಾಗಾಣಿಕೆಯನ್ನು ತಡೆಗಟ್ಟಲು ಸತ್ಯಸಂಧತೆಗೆ ಹೆಸರುವಾಸಿಗಳಾದ 5-6 ಫ್ಲೈಯಿಸು ಅಧಿಕಾರಿಗಳು ಬೇಕಾಗಿರುವರೆಂದು, ಆಹಾರ ಮಂತ್ರಿ ಶ್ರೀ ಶ್ರೀ ವಿಠಲದಾಸಕಿಟ್ಟರು ಪತ್ರಿಕೆಯವರಿಗೆ ಹೇಳಿದರು.

★

ಎಚ್ಚರಿಕೆ ನುಡಿ

ತುಮಕೂರು— ಜನತೆಗೆ ಸಾಕಷ್ಟು ಆಹಾರ ದೊರೆಯದಿದ್ದರೆ, ದೇಶವು ಕಮ್ಯೂನಿಜಂ ಕಡೆ ತಿರುಗಬಹುದೆಂದು ಉಪಾಧ್ಯಕ್ಷ ಗಿರಿಯವರು ಎಚ್ಚರಿಸಿದರು.

★

ಸೂರ್ಯನ ಕ್ರೋಧ

ಪ್ರಸಾದೇನ (ಕ್ಯಾಲಿಫೋರ್ನಿಯ)— 1969 ರಲ್ಲಿ ಕ್ರೋಧ ಸೂರ್ಯನ ಪರಿಣಾಮ ಒದಗುವದೆಂದು ಖಗೋಳಶಾಸ್ತ್ರಜ್ಞರು ಅಭಿಪ್ರಾಯಪಟ್ಟರುವರು.

★

ಹಿಂದೂತತ್ವ ಜ್ಞಾನಪೀಠ

ಮೈಸೂರು— ವಿಶ್ವವಿದ್ಯಾನಿಲಯವು ಸ್ಥಾಪಿಸಲಿರುವ ಹಿಂದೂತತ್ವ ಜ್ಞಾನಪೀಠವನ್ನು ತಾ॥ 25 ರಂದು ಉಪ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಉದ್ಘಾಟಿಸುವರು

★

ನಾಗಪುರದಲ್ಲಿ

ನಾಗಪುರ— 2 ದಿನಗಳಿಂದ ನಡೆಯುತ್ತಿರುವ ಗಲಭೆ ವಿವಿಧ ಭಾಗಗಳಲ್ಲಿ ಹರಡುತ್ತಿದೆ — ಇಲ್ಲಿವರೆಗೆ ಸುಮಾರು 25 ಮಂದಿ ಸತ್ತಿರುವರು – 125 ಮಂದಿ ಬಂಧಿಸಲ್ಪಟ್ಟಿದ್ದಾರೆ.

ಫ್ರಾನ್ಸಿನ ಭೀಕರ ಪರಿಸ್ಥಿತಿ

ಪ್ಯಾರಿಸ್— ಏಳು ಉಗ್ರಗಾಮಿ ಕ್ರಾಂತಿಕಾರಿ ಪಕ್ಷಗಳನ್ನು, ಪ್ಯಾರಿಸ್ ಮತ್ತು ಇತರ 5-6 ಪಟ್ಟಣಗಳಲ್ಲಿ ನಿರಂತರ ಎರಡು ರಾತ್ರಿಗಳು ನಡೆದ ಹಿಂಸಾಕೃತ್ಯಗಳ ಪರಿಣಾಮವಾಗಿ, ನ್ಯಾಯಬಾಹಿರ ಮಾಡಲಾಗಿದೆ – ತಾ॥ 23 ರಂದು ನಡೆಯುವ ಶಾಸನ ಸಭೆ ಚುನಾವಣಾ ಫಲಿತಾಂಶದಲ್ಲಿ ದೇಶದಲ್ಲಿ ಎಲ್ಲ ಪ್ರದರ್ಶನಗಳನ್ನೂ ಸರಕಾರ ಪ್ರತಿಬಂಧಿಸಿದೆ – ಪ್ರದರ್ಶನ ನಡೆಸುವವರನ್ನು ಶಿಕ್ಷೆಗೆ ಒಳಪಡಿಸಲಾಗುವುದು – ಮತ್ತೆ ಸೇರಿದರೆ ಅವರನ್ನು ವಿಚಾರಣೆಗೊಳಪಡಿಸಲಾಗುವುದು ; ಶಿಕ್ಷೆ 6 ತಿಂಗಳಿಂದ 2 ವರ್ಷಗಳವರೆಗೆ ವಿಧಿಸಲಾಗುವುದು.

●

ಪ್ರದರ್ಶನಕಾರರ ಹಾವಳಿ

ಪ್ಯಾರಿಸ್— ಪ್ರದರ್ಶನಕಾರರ ಹಾವಳಿಯಿಂದ ಮಂಗಳವಾರ ಸುಡಲ್ಪಟ್ಟ ಕಾರುಗಳು, ಕೆಡವಲ್ಪಟ್ಟ ಗಿಡ ಮರಗಳೂ, ಮುರಿಯಲ್ಪಟ್ಟ ಸಂಚಾರ ದೀಪಗಳೂ ರಾತ್ರಿ ರಾಶಿಯಾಗಿ ಬಿದ್ದಿದ್ದವು – 75 ಕಾರುಗಳು, ಒಂದು ಪೋಲೀಸ್ ಮೋಟಾರು ಸೈಕಲ್ 8 ಪೋಲೀಸು ವ್ಯಾನ್, ಒಂದೆರಡು ಪೋಲೀಸು ಕಾರ್ ಹಾಳು ಅಥವಾ ಡ್ಯಾಮೇಜು ಮಾಡಲ್ಪಟ್ಟವು – 5 ಪೋಲೀಸು ಸ್ಟೇಷನ್ನುಗಳು ಸೂರೆಹೊಡಲ್ಪಟ್ಟವು.

★

ಎಸ್ಸೆಸ್ಪಿ ಸತ್ಯಾಗ್ರಹಿಗಳು

ಲಕ್ನೋ— ಇಲ್ಲಿವರೆಗೆ ಶಾಸನೋಲ್ಲಂಘನ ಚಳವಳಿದಲ್ಲಿ ಭಾಗವಹಿಸಿದ 1500 ಎಸ್ಸೆಸ್ಪಿ ಸತ್ಯಾಗ್ರಹಿಗಳು ಬಂಧಿಸಲ್ಪಟ್ಟಿರುವರು.

★

ಮೈಸೂರು— ಅಮೆರಿಕಾದ ಬಫೆಲೋ ವಿಶ್ವವಿದ್ಯಾಲಯದ 16 ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಲ್ಲಿ 1 ವರ್ಷ ವಿವಿಧ ರೀತಿ ವ್ಯಾಸಂಗ ಪಡೆಯಲು ಬರಲಿರುವರು.

ಬಲ್ಗೇರಿಯಾದಲ್ಲಿ ಗಾಂಧಿ ಶತಮಾನೋತ್ಸವ

ಬಲ್ಗೇರಿಯಾದಲ್ಲಿ ಮಹಾತ್ಮಾ ಗಾಂಧಿಯವರ ಶತಮಾನೋತ್ಸವವನ್ನು ನಡೆಸುವದಕ್ಕಾಗಿ ಬಲ್ಗೇರಿಯಾದಲ್ಲಿರುವ ವಿಶ್ವಸಂಸ್ಥೆಯ ರಾಷ್ಟ್ರೀಯ ಮಂಡಳಿ ಮತ್ತು ಪರದೇಶಗಳೊಡನೆ ಸ್ನೇಹ ಮತ್ತು ಸಾಂಸ್ಕೃತಿಕ ಸಂಬಂಧ ಬೆಳೆಸುವ ಸಂಸ್ಥೆಗಳು ಒಟ್ಟಿಗೆ ಸೇರಿ ಯೋಜನೆಗಳನ್ನು ರೂಪಿಸಿವೆ. ಈ ಕಾರ್ಯಕ್ರಮಗಳಲ್ಲಿ ಇಂಡಿಯದ ದೇಶದ ನಾಯಕನ ನೆನಪಿಗಾಗಿ ಒಂದು ಸಾಯಂಕಾಲವನ್ನು ಮುಡುಪಿಡಲಾಗಿದೆ. ಈ ಸಂಜೆ ಮಹಾತ್ಮಾ ಗಾಂಧಿಯವರ ಜೀವನ ಮತ್ತು ಸಾಧನಗಳ ಮೇಲೆ ಭಾಷಣಗಳೂ ಮತ್ತು ವಿಶೇಷವಾಗಿ ರೂಪಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುತ್ತವೆ. ಸ್ನೇಹ ಮತ್ತು ಸಾಂಸ್ಕೃತಿಕ ಸಂಸ್ಥೆಯ 'ಭಾರತ' ವಿಭಾಗದ ಸದಸ್ಯರು ಮಹಾತ್ಮಾ ಗಾಂಧಿಯವರ ಮೇಲೆ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಚುರಪಡಿಸುತ್ತಾರೆ. ಶತಮಾನೋತ್ಸವದ ಮಂಡಳಿಯ ಸದಸ್ಯರು ಗಾಂಧೀಜೀಯವರ ಜೀವದವ ವಿವಿಧ ಚಿತ್ರಗಳನ್ನು ರೂಪಿಸುವ ಒಂದು ಪ್ರದರ್ಶನವನ್ನು ನಡಿಸುವ ಯೋಚನೆಯಲ್ಲಿದ್ದಾರೆ.

ಬಲ್ಗೇರಿಯಾದಲ್ಲಿ ಈ ಶತಮಾನೋತ್ಸವವನ್ನು ಯಶಸ್ವಿಯಾಗಿ ಮಾಡಲು ಬಲ್ಗೇರಿಯಾ ಸಂಸ್ಥೆಯು ಭಾರತ ಗಾಂಧಿ ಶತಮಾನೋತ್ಸವ ಕಮಿಟಿಯೊಂದಿಗೆ ಸಮಾಲೋಚಿಸುತ್ತಿದೆ.

ಗೋವಧೆ ಕೂಡಲೆನಿಶೇಧವಾಗಲಿ

Cow Slaughter should be banned Immediately

S H A K T I

S U D H A

A Superb Tonic



ಗೋರಕ್ಷಣೆ ಮಾಡಿ, ಪಾ ನೆದಯಾ ಕಾರ್ಯಗಳು ಹೆಚ್ಚೆ ಚಾಲ್ತಿಗೆ ನಡೆಯಲಿ

Protect the Cow

ವುಡ್‌ಲಾಂಡ್ಸ್ ಜನಪ್ರಿಯ 7ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ಮಿಕ 3 ಪ್ರದರ್ಶನ]

ಆ ಪೆರ— 14—6—68 ರಿಂದ

ಪದ್ಮಿನಿ ಪಿಕ್ಚರ್ಸ್‌ರವರ

ಕಿತ್ತೂರು ಚೆನ್ನಮ್ಮ

ಕನ್ನಡ

ನಿರ್ಮಾಪಕ, ನಿರ್ದೇಶನ : ಬಿ. ಆರ್. ಪಂತುಲು

Help The Gorakshana

ಗೋರಕ್ಷಣಾಕ್ಕೆ ಹೊಂಬಳು ನೀಡಿ

— ಗೋರಕ್ಷಣಾ ನ್ಯಾಸಕ್ಕಾದಕರು ವಿನಂತಿ —

ಗೋರಕ್ಷಣಾಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನೆಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎನ ವಿಶ್ವನಾಥ್ ಜಯನಗರ ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತಸಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಂಗನೂರು,
ಗೋರಕ್ಷಣಾ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು ೪

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharo Nirato M S Krishna Rao (Proprietor) at the Satyavadi Press Chamarajapuram, Mysoe 4